

# ಗ್ಲಿಸರಿನ್ ಇಲ್ಲದೆ ಅಳುವ ಹುಡುಗಿ!

ಹೆಸರು ವಿಭಾ. 'ಆಟ' ಚಿತ್ರದ ನಾಯಕಿ. ನಿರ್ಮಾಪಕ ಶೈಲೇಂದ್ರಬಾಬು ತಮ್ಮ ಪುತ್ರ ಸುಮಂತನನ್ನು ನಾಯಕನಾಗಿ ಗೆಲ್ಲಿಸಲು ಸಕಲ ಪ್ರಯತ್ನ ಮಾಡುತ್ತಿರುವ ಚಿತ್ರ ಈ 'ಆಟ'. ಆ ಕಾರಣದಿಂದಲೇ ಅವರು ನಾಯಕಿಯ ಆಯ್ಕೆಗೆ ವಿಪರೀತ ಎಚ್ಚರಿಕೆ ವಹಿಸಿ, ಕೊನೆಗೆ ವಿಭಾಳನ್ನು ಆರಿಸಿದ್ದಾರೆ.

ವಿಭಾ ಚೆನ್ನೈನ ಹುಡುಗಿ. ಭರತನಾಟ್ಯ ಕಲಾವಿದೆ. 'ಆಟ' ಚಿತ್ರದಲ್ಲಿ ನೃತ್ಯಕ್ಕೆ ಸಾಕಷ್ಟು ಅವಕಾಶವಿದ್ದು, ಆ ದೃಶ್ಯಗಳಿಗೆ ಜೀವ ತುಂಬಲು ಭರತನಾಟ್ಯ ನೆರವಿಗೆ ಬಂತಂತೆ. ಅಷ್ಟು ಮಾತ್ರವಲ್ಲ, ಗ್ಲಿಸರಿನ್ ಇಲ್ಲದೆ ಕಣ್ಣೀರು ಸುರಿಸಬಲ್ಲ ಪ್ರತಿಭೆ ಈಕೆಯದಂತೆ. ವಿಭಾ ಸಹಜ ನಟನೆ ನಿರ್ದೇಶಕ ವಿಜಯಕುಮಾರ್ ಹಾಗೂ ನಿರ್ಮಾಪಕ ಶೈಲೇಂದ್ರಬಾಬು ಅವರಿಗೆ ಸಿಕ್ಕಾಪಟ್ಟೆ ಇಷ್ಟವಾಗಿದೆ. ಈ ಖುಷಿಯಲ್ಲೇ ತಮ್ಮ ನಿರ್ಮಾಣದ ಇನ್ನೊಂದು ಚಿತ್ರದಲ್ಲೂ ಈ ಹುಡುಗಿಗೆ ಅವಕಾಶ ಕೊಡುವುದಾಗಿ ಬಾಬು ಪ್ರಕಟಿಸಿದ್ದಾರೆ.

ಅಂದಹಾಗೆ, ನಾಲ್ಕು ತಿಂಗಳ ಹಿಂದೆ ಕಾಸಿನಷ್ಟೂ ಕನ್ನಡ ಗೊತ್ತಿಲ್ಲದಿದ್ದ ವಿಭಾ ಈಗ ಕನ್ನಡದಲ್ಲೇ ಮಾತನಾಡಬಲ್ಲರು. ಆಕೆಯ ಪಾಲಿಗೆ ಭಾಷೆ ಕಲಿಯುವುದು ಕೂಡ ಒಂದು 'ಆಟ' ಇರಬಹುದೇನೊ?

# ಮದುವೆ ಮನೇಲಿ...

'ಮನೆ ಕಟ್ಟಿ ನೋಡು ಮದುವೆ ಮಾಡಿ ನೋಡು' ಎನ್ನುವ ಗಾದೆ ಮಾತಿದೆ. ಇದರ ಮುಂದುವರಿದ ಭಾಗವಾಗಿ 'ಸಿನಿಮಾ ನಿರ್ಮಿಸಿ ನೋಡು' ಎನ್ನುವುದನ್ನೂ ಸೇರಿಸಬಹುದೇನೊ? 'ಯಜಮಾನ' ಚಿತ್ರದ ಮೂಲಕ ಕನ್ನಡ ಚಿತ್ರರಂಗದಲ್ಲಿ ಹೊಸ ಇತಿಹಾಸ ಬರೆದಿದ್ದ ನಿರ್ಮಾಪಕ ರೆಹಮಾನ್, ಈಗ 'ಮದುವೆ ಮನೆ'ಯನ್ನು ಗೆಲ್ಲಿಸಲು ಪಡುತ್ತಿರುವ ಕಷ್ಟ ನೋಡುತ್ತಿದ್ದರೆ 'ಸಿನಿಮಾ ಸಹವಾಸ ಸಾಕು ಸಾಕು' ಅನ್ನಿಸದಿರದು.

'ಮದುವೆ ಮನೆ'ಯನ್ನು ತೆರೆ ಕಾಣಿಸುವುದೇ ರೆಹಮಾನ್ ಅವರಿಗೆ ಕಷ್ಟವೆನ್ನಿಸಿದೆ. ಆಗ ನೆರವಿಗೆ ಬಂದಿರುವುದು ಅಭಿಮಾನಿಗಳಿಂದ 'ಗಂಡುಗಲಿ' ಎಂದು ಕರೆಸಿಕೊಳ್ಳುವ ಕೆ.ಮಂಜು. ದೋಸ್ತಿಯ ನೆನಪಿನಲ್ಲಿ ರೆಹಮಾನ್ ಅವರಿಗೆ ನೆರವಾಗಿರುವ ಮಂಜು, 'ಮದುವೆ ಮನೆ'ಯನ್ನು ತೆರೆ ಕಾಣಿಸಲು ಸೈ ಎಂದಿದ್ದಾರೆ. 'ಈ ಚಿತ್ರ ದುಡ್ಡು ಮಾಡಲಿ, ರೆಹಮಾನ್‌ರ ಸಿನಿಮಾ ಸಹವಾಸ ಇಷ್ಟಕ್ಕೇ ಕೊನೆಯಾಗಲಿ' ಎನ್ನುವುದು ಮಂಜು ಆಶಯ.



'ಮದುವೆ ಮನೆ' ಗೆಲ್ಲುವುದು ನಟ ಗಣೇಶ್ ಹಾಗೂ ನಿರ್ದೇಶಕ ಸುನೀಲ್ ಕುಮಾರ ಸಿಂಗ್ ಅವರಿಗೂ ಮುಖ್ಯವೆನ್ನಿಸಿದೆ. 'ಕೂಲ್' ಚಿತ್ರದ ದಯನೀಯ ಸೋಲಿನಿಂದ ಚೇತರಿಸಿಕೊಳ್ಳಲು ಗಣೇಶ್‌ಗೆ ಈ ಚಿತ್ರ ಗೆಲ್ಲುವುದು ಅನಿವಾರ್ಯ. ನಿರ್ದೇಶಕ ಸುನೀಲ್ ಕುಮಾರ್ ಕಿರುತೆರೆಯಲ್ಲಿ ಹೆಸರು ಮಾಡಿದವರು. ಅವರೀಗ ಸಿನಿಮಾದಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

# ಹರಿಪ್ರಿಯಾಳ ಭರ್ಜರಿ ಕೊಯಿಲು!



'ಮಂಜಿನ ಹನಿ', 'ಸಾಗರ್', 'ಸೂಪರ್ ಶಾಸ್ತ್ರಿ'– ಹೀಗೆ ಕೈತುಂಬಾ ಅವಕಾಶಗಳನ್ನಿಟ್ಟುಕೊಂಡಿರುವ ಕನ್ನಡದ ಹುಡುಗಿ ಹರಿಪ್ರಿಯಾ ಅವರ ದೀಪಾವಳಿ ಕೊಯಿಲು ಭರ್ಜರಿಯಾಗಿದೆ. ತಮ್ಮ ನಟನೆಯ ತೆಲುಗಿನಲ್ಲೊಂದು ಸಿನಿಮಾ, ತಮಿಳಿನಲ್ಲಿನ್ನೊಂದು ಸಿನಿಮಾ ತೆರೆಕಂಡಿರುವ ಬೆನ್ನಿಗೇ ಕನ್ನಡದಲ್ಲೊಂದು ಹೊಸ ಸಿನಿಮಾಕ್ಕೆ ನಾಯಕಿಯಾಗಿ ಆಕೆ ಆಯ್ಕೆಯಾಗಿದ್ದಾರೆ. ಶ್ರೀನಗರ ಕಿಟ್ಟಿ ನಾಯಕರಾಗಿರುವ 'ಕಿಲಾಡಿ ಕಿಟ್ಟಿ' ಚಿತ್ರಕ್ಕೆ ಹರಿಪ್ರಿಯಾ ನಾಯಕಿ.

ಅನಂತರಾಜು ನಿರ್ದೇಶಿಸುತ್ತಿರುವ 'ಕಿಲಾಡಿ ಕಿಟ್ಟಿ' ತೆಲುಗಿನ 'ಬ್ಲೇಡ್ ಬಾಬ್ಜಿ' ಚಿತ್ರದ ರೀಮೇಕ್. ಕಿರುತೆರೆ ಹಾಗೂ ಬೆಳ್ಳಿತೆರೆಯಲ್ಲಿ ಬಿ.ಸುರೇಶ ಅವರೊಂದಿಗೆ ಕೆಲಸ ಮಾಡಿರುವ ಶಿವಕುಮಾರ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ಕಳೆದ ವಾರ 'ಕಿಲಾಡಿ ಕಿಟ್ಟಿ' ಚಿತ್ರತಂಡ ನಡೆಸಿದ ಸುದ್ದಿಗೋಷ್ಠಿಯಲ್ಲಿ ಹರಿಪ್ರಿಯಾಳೇ ಕೇಂದ್ರಬಿಂದು. ಮಾಧ್ಯಮ ಮಿತ್ರರ ಸಮ್ಮುಖದಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ಆಕೆ, 'ನನಗೀಗ ಇಪ್ಪತ್ತು' ಎಂದಾಗ 'ಇನ್ನೂ ಇಪ್ಪತ್ತಾ?' ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡವರೇ ಹೆಚ್ಚು. 'ಹೌದು, ನನಗಿನ್ನೂ ಇಪ್ಪತ್ತೇ. ನಾಲ್ಕು ವರ್ಷಗಳ ಹಿಂದೆ ಚಿತ್ರರಂಗಕ್ಕೆ ಬಂದಿದ್ದಾಗ ನಾನಿನ್ನೂ ಷೋಡಶಿ' ಎಂದು ಹರಿಪ್ರಿಯಾ ಗಂಭೀರವಾಗಿ ಹೇಳಿದರು.

■ ರಘು